ಈಗೆಲ್ಲಾ ಬ್ಯೂಟಿಪಾರ್ಲರ್‌ಗಳು ಗಲ್ಲಿಗೊಂದು ಆದ ಮೇಲೆ ಒರಿಜಿನಲ್ ರೂಪ ಪತ್ತೆ ಹಚ್ಚೋದೇ ತ್ರಾಸಾಗ್ತಿದೆಯೆಂದು ಪೇಚಾಡಿದ. ಮೇಲೆತ್ತಿ ಬಾಚಿ ಎರಡು ಜಡೆಯನ್ನೇನೋ ಹಾಕಿದ್ದಳಾದರೂ ಒರಿಜಿನಲ್ಲೋ ವಿಗ್ಗೋ ಎಂಬ ಗುಮಾನಿಯೂ ಕಾಡದಿರಲಿಲ್ಲ. ತುಟಿಗಳು ತೊಂಡೆಹಣ್ಣಿನಂತಿವೆ. ಲಿಪ್‌ಸ್ಟಿಕ್ ಪ್ರಭಾವದಿಂದೆಂಬುದು ಪಕ್ಕಾ. ತೆಳ್ಳಗಂತೂ ಇದ್ದಾಳೆ ಸದ್ಯಕ್ಕೆ. ನಡುವೋ ಸಿಂಹಕಟಿ, ಸೆರಗು ಒಂದಿಷ್ಟು ಸರಿದಿದ್ದರೆ ನಾಭಿ ಆಳವೋ, ಬಾದಾಮಿಶೇಪೋ ಸೀಡ್‌ಲೆಸ್ ದ್ರಾಕ್ಷಿಯೋ, ಒಣದ್ರಾಕ್ಷಿಯೋ! ಅದರ ವ್ಯಾಸ ನ್ಯಾಸ ವಿನ್ಯಾಸ ಹೆಂಗೋ ನೋಡಬಹುದಿತ್ತು ಎಂದು ಪೇಚಾಡಿದ ರಮೇಶ. ಕತ್ತು ಶಂಖದಂತಿದೆಯೇನೋ ಸರಿ. ಅದರ ಕೆಳಗೆ ವಿರಾಜಮಾನವಾಗಿರುವ ತುಂಬಿದೆದೆಗಳು ಕಣ್ಣು ಕುಕ್ಕುವಾಗಲೂ ಒಳಗೆ ಪ್ಯಾಡ್ ಏನಾದರೂ? ಎಂಬ ಎದೆಗುದಿಗೆ ಬಿದ್ದ. ನಗುವಾಗ ಅವಳ ದಂತಪಂಕ್ತಿಯತ್ತ ಕಣ್ಣು ನೆಟ್ಟ. ಬೆಳ್ಳಗೆ ಮಿಂಚಿದವು. ನಿನ್ನೆ ಡೆಂಟಲ್ ಡಾಕ್ಟರ‍್ತಾವ ಹೋಗಿ ಪಾಲಿಶ್ ಮಾಡಿಸಿಕೊಂಡಿರಲಿಕ್ಕೂ ಸಾಕು. ಆದರೂ ಕೊಕ್ರಾಬಿಕ್ಕಿಯಿಲ್ಲ. ಕಿಂಡಿ ಹಲ್ಲಲ್ಲವೆಂದು ನಿಟ್ಟುಸಿರಿಟ್ಟ. ಕೈ ಕಾಲು ಉಗುರುಗಳಿಗೆಲ್ಲಾ ರೋಜ಼್ ನೇಲ್ ಪಾಲಿಶ್, ಯಾವುದು ಸ್ವಂತದ್ದೋ ಯಾವುದು ಕೊಂಡದ್ದೋ ಎಂದು ಪೇಚಾಡುತ್ತಲೇ ಅವಳನ್ನು ಅಡಿಯಿಂದ ಮುಡಿಯವರೆಗೆ ಎಗ್ಗಿಲ್ಲದೆ ನೋಡಿದ್ದ ರಮೇಶ.

ಮೊದಲು ಹಂಸದೋಪಾದಿಯಲ್ಲಿ ಆಗಮಿಸಿ, ತಿಂಡಿ ಪ್ಲೇಟ್ ಕಾಫಿಕಪ್‌ಗಳನ್ನಿಟ್ಟು ಹೋದ ಮೀನಾಕ್ಷಿಯೇ ಎಗೇನ್ ಆಗಮಿಸಿ, ಸರಸರನೆ ತಿಂಡಿಯ ಪ್ಲೇಟ್ ಕಪ್ಸ್ ಒಯ್ದಾಗ ಚುರುಕು ಹುಡುಗಿಯೆಂದು ಫುಲ್ ಮಾರ್ಕ್ಸ್ ಹಾಕಿದ. ತಾನೋ ಬಿ.ಎ. ಫೇಲು. ಹಾಗೆ ನೋಡಿದರೆ ಹುಡುಗಿ ಬಿ.ಎ. ಪಾಸು ಎಂದೂ ಸಂತೈಸಿಕೊಂಡ. ಅವನು ಬಿ.ಎ. ಫೇಲು ಎಂದು ತಿಳಿದ ಮೇಲು ಪಿಸಿ ಅರ್ಥಾತ್ ಕಾನ್ಸ್‌ಟೇಬಲ್ ಹುದ್ದೆಯಲ್ಲಿರುವನೆಂದು ತಿಳಿದರೂ ಸರ್ಕಾರಿ ನೌಕರಿಯೆಂಬ ಖಾತರಿಯ ಮೇಲೆ ಹೆಣ್ಣಿನವರು ಒಳಗೇ 'ಪಿಸಿ' ಎಂದು ಗೊಣಗಿದರೂ, ಅವನು 'ಪಿಎಸ್‌ಐ' ನೇಮಕಾತಿಯಲ್ಲಿ ಪಾಸಾಗಿದ್ದಾನೆಂದು ರುಜುವಾತಾಗುತ್ತಲೇ ಮುಕ್ತ ಮನಸ್ಕರಾಗಿ ಧಾರೆ ಎರೆಯಲು ಸನ್ನದ್ಧರಾದರು. ಆದರೂ ಆತ ಹೆಚ್ಚು ವರದಕ್ಷಿಣೆ ಕೇಳಿ ಬಿಟ್ಟರೆ ಎಂಬ ಭೀತಿ. ಅದೇ ತಾನೆ ಕ್ಲೈಮ್ಯಾಕ್ಸ್. ತಾವೇನು ನಿರೀಕ್ಷಿಸುತ್ತೀರಿ ಎಂದು ತಂದೆ ಕೇಳಿ ಹಿಡಿಯಷ್ಟಾದ. ರಮೇಶನ ಗೆಳೆಯರಿಂದ ಅವನಿಗೆ ದುಶ್ಚಟಗಳಿಲ್ಲವೆಂಬ ಮಾಹಿತಿಯನ್ನರಿತಿದ್ದ ಹೆಣ್ಣಿನ ತಂದೆ ವರದಕ್ಷಿಣೆ ಕೇಳುವ ದುಶ್ಚಟ ಒಂದಿರದಿದ್ದರೆ ಸಾಕಪ್ಪಾ ಎಂದು ಮನೆದೇವರ ಪಟಕ್ಕೆ ಮನದಲ್ಲೇ ಶರಣು ಮಾಡಿ ಅವನನ್ನೇ ಪಿಳಿಪಿಳಿಸಿದ. ರಮೇಶ ತಟ್ಟನೆ ತಾನು ವರದಕ್ಷಿಣೆ ವಿರೋಧಿ ಅಂದ. ತನಗೆ ನಯಾಪೈಸೆಯೂ ಬೇಡವೆಂದು ಹೇಳಿ ಗೆಳೆಯರತ್ತ ನೋಡಿ ಹೀರೊ ಪೋಜ್ ಕೊಟ್ಟ. ಅದ್ದೂರಿಯಾಗಿ ಲಗ್ನ ಮಾಡಿಕೊಟ್ಟರೆ ಸಾಕೆಂದು ಬಿಟ್ಟ. ನಂಬಲಾಗದಿದ್ದರೂ ಎಲ್ಲರೂ ನಂಬಿದರು.

ವರನಿಗೆ ಏನಾದರೂ ಐಬು ಇದ್ದೀತೆ ಎಂದಂಜಿದ್ದು ಮಾತ್ರ ಮೀನಾಕ್ಷಿ ಒಬ್ಬಳೇ. ಆದರೆ ಹೆಣ್ಣು ಹೆತ್ತವರಿಗೆ ಸ್ವರ್ಗ ಮೂರೇ ಗೇಣು. 'ಯಾವಾಗ ಮದುವೆ ಇಟ್ಕೊಂಬೋದು ಅಳಿಯಂದಿರೆ?' ಅಂತ ವಿನೀತರಾದರು. 'ನಾಳೇನೆ ಇಟ್ಕೊಂಡರೂ ಓಕೆ' ಅಂದುಬಿಟ್ಟ ರಮೇಶ.

'ತಮ್ಮ ಮನೆಯೋರೂ ಬಂದು ನೋಡ್ಲಿ' – ಇದೀಗ ಲೋಕಾರೂಢಿ ಮಾತು ಹೆಣ್ಣಿನ ತಂದೆ ಬಾಯಿಂದ ಹೊರಬಂತು. 'ಹಿರೇರೂ ಒಪ್ಪಬೇಕಲ್ಲಾ... ಅಲ್ವೆ?' ಎಂದೂ ಗುಂಜಾಡಿದರು. 'ನಾನು ಓಕೆ ಅಂದ್ಮೇಲೆ ಮುಗೀತು. ಸೈಲೆಂಟಾಗಿ ಬಂದು ಅಕ್ಕಿ ಕಾಳು ಹಾಕಿ ಹೋಗ್ತಿರೋದೇ ಡೋಂಟ್‌ವರಿ ಮಾವ' ಅಂದುಬಿಟ್ಟ ರಮೇಶ.

'ಎಲ್ಲಾರಾ ಉಂಟೆ. ಅವರೂ ಬಂದು ನೋಡ್ಲಿ. ನಮ್ಮದು ಸಂಪ್ರದಾಯಸ್ಥರ ಕುಟುಂಬ' ಎಂದು ಮೀನಾಕ್ಷಿಯ ತಂದೆ ಮತ್ತಷ್ಟು ವಿನೀತರಾದರು. 'ನನ್ನಿಷ್ಟವೇ ಅವರಿಷ್ಟ... ಇದರ ಮೇಲೆ ನಿಮ್ಮಿಷ್ಟ' ಎಂದು ಗೆಳೆಯರೊಂದಿಗೆ ಮೇಲೆದ್ದು ಬಾಡಿಗೆ ಕಾರು ಏರಿದ.

***

ಮುಂದೆ ಆಗಿದ್ದೆಲ್ಲಾ ಅವನಿಷ್ಟದಂತಲ್ಲವೇ ಅಲ್ಲ. ಮಗ ಕೊನೆಗೂ ಹೆಣ್ಣೊಂದನ್ನು ಒಪ್ಪಿಕೊಂಡನಲ್ಲಾ ಎಂಬ ಹಿಗ್ಗಿನಲ್ಲೂ ವರದಕ್ಷಿಣೆ ಬೇಡವೆಂದನೆಂಬ ಕಹಿವಾರ್ತೆಯನ್ನು ಗೆಳೆಯರು ಪ್ರಸಾರ ಮಾಡುತ್ತಲೇ ರಮೇಶನ ತಂದೆ ಅಗದಿ ರಾಂಗ್ ಆದರು. 'ಅಲ್ಲಲೆ, ಮನೆಯಾಗೆ ಲಗ್ನವಾಗದ ತಂಗಿಯೊಬ್ಬಳವಳೆ ಎಂಬ ಖಬರ್ ಬ್ಯಾಡ್ವೇನೇ ನಿನ್ಗೆ? ನೀನೇನೋ ವರದಕ್ಷಿಣೆ ಬೇಡಂತ ಹೀರೊ ಆದ್ಯಪಾ. ನಾಳೆ ನಿನ್ನ ತಂಗಿನಾ ಲಗ್ನ ಆಗೋನು ದಂಡಿಗಟ್ಟಲೆ ಮಡಗಿ ಅಂತ ಕೂತ್ರೆ ನಾ ಎಲ್ಲಿ ಹೋಗಿ ನೇಣು ಹಾಕ್ಕಂಬ್ಲಿ? ನಿನ್ನ ಪಿಎಸ್‌ಐ ನೇಮಕಾತಿಗೆ ಲಕ್ಷಗಟ್ಟಲೆ ಸಾಲಮಾಡಿ ತಂದು ಪೀಕಿದ್ದೇನಲ್ಲಾ ಅದನ್ನು ಯಾರ‍್ಲಾಲೆ ತೀರಿಸೋದು... ಭಡವಾ?' ತಂದೆ ಕಂಗಾಲಾದಾಗ ರಮೇಶನೂ ಉಗುಳು ನುಂಗಿದ.

ತಂದೆಯೋ ರಿಟೈರ್ಡ್ ಮಾಸ್ಟರ್. ಸ್ವಂತ ಮನೆ ಬಿಟ್ಟರೆ ಮತ್ತೇನಿಲ್ಲ. ತನಗೆ ನೌಕರಿ ಸಿಕ್ಕ ಮೇಲೆಯೇ ಉಣ್ಣಲಿಕ್ಕೆ ತೊಡಲಿಕ್ಕೆ ಇದ್ದ ಫಜೀತಿ ಕಡಿಮೆಯಾದ್ದು. ತಂದೆಗೆ ಇಸ್ಪೀಟಿನ ಚಟ ಬೇರೆ. ಸೋತಾಗಲೂ ಗೆದ್ದಾಗಲೂ ಒಂದೆರಡು ಪೆಗ್ಗು ಎಗ್ಗು ಅಷ್ಟು ಬಿಟ್ಟರೆ ರಿಟೈರ್ಡ್ ಮಾಸ್ಟರ್ ದೇವರಂಥ ಮನುಷ್ಯನೆಂದು ಮಂದಿ ಕೊಂಡಾಡುತ್ತಿದ್ದದ್ದೂ ಉಂಟು. ಮನೆಯವರಾರೂ ರಮೇಶನ ತೀರ್ಮಾನವನ್ನು ಸಮ್ಮತಿಸಲಿಲ್ಲ. ಅವನೂ ಇವರೆಲ್ಲಾ ಈ ಪರಿ ತಿರುಗಿಬಿದ್ದಾರೆಂದು ಕನಸಲ್ಲೂ ಎಣಿಸಿದವನಲ್ಲ. 'ನಿನಗೇನು ತಿಳಿತೇತ್ಲೆ, ಕಾನ್ಸ್‌ಟೇಬಲ್ ನೀನು. ನಡಿ ಹೆಣ್ಣೋರ‍್ತಾವ ನಾವು ಮಾತಾಡ್ತೀವಿ. ನೀನು ಬಾಯಿ ಮುಚ್ಕೊಂಡು ತೆಪ್ಪಗೆ ಇದ್ದರಾತು' ಅಂತ ತಾಕೀತು ಮಾಡಿದರು. ಹೆಣ್ಣಿನ ಮನೆಯೋರೂ ಸ್ಥಿತಿವಂತರೇ, ಎಣ್ಣೆ ವ್ಯಾಪಾರಿಗಳು ಅಂತ ತಿಳಿದ ಮೇಲಂತೂ ವರದಕ್ಷಿಣೆ ಕೇಳೋ ಸಮಸ್ತ ಹಕ್ಕೂ ಗಂಡು ಹೆತ್ತವರಿಗಿದೆಯೆಂದೇ ಸಮರಕ್ಕೆ ಸನ್ನದ್ಧರಾದರು.

***

ಮನೆಯವರೊಂದಿಗೆ ಮೀನಾಕ್ಷಿಯ ಮನೆಗೆ ಮಾತುಕತೆಗೆ ಬಂದು ಕೂತಾಗ ರಮೇಶನ ಬಾಯಿಗೆ ಗೋದ್ರೆಜ್ ಲಾಕ್ ಬಿದ್ದಿತ್ತು. 'ಅವನೇನ್ ಸ್ವಾಮಿ, ಹುಡುಗು ಮುಂಡೇದು. ವರದಕ್ಷಿಣೆ ಬ್ಯಾಡ ಅನ್ನೋ ಅಧಿಕಾರ ಕೊಟ್ಟೋರಾರ ಯಾರ್ ಅವನ್ಗೆ? ಅವನ್ನ ಓದಿ ಬರೆಸೋಕೆ ರಗ್ಗಡ ರೊಕ್ಕ ಸುರ‍್ದೀವಿ. ಪಿಎಸ್‌ಐ ನೌಕರಿಗಾಗಿ ಲಕ್ಷಗಟ್ಟಲೆ ಸಾಲ ತಂದು ಪೀಕಿದ್ದೀವಿ. ಅದನ್ನೇನು ಇವರಪ್ಪ ಕೊಡ್ತಾನಾ?' ಎಂದು ರಮೇಶನ ಪಿತಾಮಹ ಅಂಗಾರಾದಾಗ ಮೀನಾಕ್ಷಿಯ ತಂದೆ ಹಾರ್ಟು ಧಡಕ್ಕನೆ ಒಂದು ಮಿನೀಟು ಸ್ಟಾಪಾತು. ಮೂಲೆಯಲ್ಲಿ ಕೂತು ಕಣ್ಣೆಡುತ್ತಾ ರಮೇಶನತ್ತ ಸಮ್ಮೋಹನಾಸ್ತ್ರ ಬಿಟ್ಟಳು ಮೀನಾಕ್ಷಿ. ರಮೇಶನ ತಂದೆಯ ಬ್ರಹ್ಮಾಸ್ತ್ರದ ಎದುರು ಯಾವುದೂ ಮುಂದೆ ಸಾಗಲಿಲ್ಲ. ಮಧ್ಯಸ್ಥರ ಮಾತಿಗೂ ಕಿಮ್ಮತ್ತು ನೀಡದ ರಮೇಶನ ತಂದೆಯದ್ದು ಬಿಟ್ಟ ಬಾಣ ಹಿಂಪಡೆಯದಷ್ಟು ಕಾಠಿಣ್ಯವೋ, ಅಸಹಾಯಕತೆಯೋ ಅನಿವಾರ್ಯವೋ ಅಥವಾ ಇವೆಲ್ಲವೋ. 'ನೋಡಿ ಸ್ವಾಮಿ, ನನ್ಗೂ ಒಬ್ಬಳು ಮಗಳವಳೆ ಅವಳ್ಗೂ ಲಗ್ನಮಾಡಬೇಕು. ಮಾಡಬೇಕೂ ಅಂದ್ರೆ ಡೌರಿ ಪೀಕಲೇಬೇಕು. ಈ ಕಾಲ್ದಾಗೆ ಅವನ್ಯಾವನದಾನ್ರಿ ಪುಗಟ್ ಲಗ್ನಾಗೋ ಗಾಂಡು? ಇದ್ದರೆ ಅವನು ಆರ್ಫನ್ನೇ ಆಗಿರ್ತಾನಷ್ಟೆ. ನಾಳೆ ಇಂವಾ ಪಿಎಸ್‌ಐ ಆಗ್ತಾನೆ. ಸಂಬಳಕ್ಕಿಂತ ಹೆಚ್ಚು ಗಿಂಬಳಾ ಎತ್ತುತ್ತಾನೆ. ನಾಳಿದ್ದು, ಸುಖವಾಗಿರೋಳು ನಿಮ್ಮ ಮಗಳೇಯಾ ನಾವಲ್ಲರೀ... ಕೆಲಸಕ್ಕೆ ಅಂತ ಮೂವತ್ತು ಲಕ್ಷ ಕೈ ಬಿಟ್ಟಾವೆ ನೊಡ್ರಿ. ನೀವು ಇಪ್ಪತ್ತಾರ ಕೊಟ್ಟರೇ ಲಗ್ನದ ಮಾತ್ರಪಾ...' ಕಡ್ಡಿ ಮುರಿದಂತೆ ಮಾತಾಡಿದರು ರಮೇಶನ ಪಿತಾಮಹ.

ಮೀನಾಕ್ಷಿ ಅಪ್ಪ ಅಮ್ಮ ಒಳ ಹೋಗಿ ಮಾತಾಡಿಕೊಂಡು ಬಂದಿದ್ದೂ ಆಯಿತು. 'ನೋಡ್ರಪಾ ನಮ್ಮದೇನಾರಾ ಕಷ್ಟವಿರ‍್ಲಿ. ಹದಿನೈದು ಲಕ್ಷವಾ ಹೆಂಗಾರಮಾಡಿ ತಂದು ಒಪ್ಪಿಸ್ತಿವ್ರೀಯಪಾ. ನಮ್ಮ ಯೋಗ್ಯತಾ ಇಷ್ಟೆ ಕಣ್ರಪಾ' ಎಂದು ಎಣ್ಣೆ ವ್ಯಾಪಾರಿ ಎರಡೂ ಕೈ ಎತಿ ಮುಗಿದುಬಿಟ್ಟ. ರಮೇಶ ಮುಖ ಊದಿಸಿಕೊಂಡು ಹೊರಗೆದ್ದು ಹೋದ. ಹಿಂದೆಯೇ ತಾಯಿ ತಂದೆ ಫಾಲೋ ಮಾಡಿದರು. 'ನಾನು ಲಗ್ನ ಆದ್ರೆ ಇವಳ್ನೇಯಾ' ಅಂತ ಪಾಶುಪತಾಸ್ತ್ರ ಪ್ರಯೋಗ ಮಾಡಿದ. ತಂದೆ ಬಗ್ಗಲಿಲ್ಲ. 'ನೀವು ಒಪ್ಕೋರಿ... ಇಲ್ಲ ಬಿಡ್ರಿ. ನಾನು ಗುಡಿಯಾಗಾರ ಹೋಗಿ ತಾಳಿಕೊಟ್ಟೋದು ಇವಳ್ಗೆಯಾ... ಇಷ್ಟಿದ್ದರೆ ಬರ‍್ರಿ' ಎಂದು ರಮೇಶ ಕೊನೆಯ ಆಗ್ನೇಯಾಸ್ತ್ರ ಪ್ರಯೋಗ ಮಾಡಿದ. ಹೊಟ್ಟೆಯಲ್ಲಿ ಬೆಂಕಿ ಬಿದ್ದಂಗಾತು. 'ನಾವು ಇವನ ಮಾತೀಗ ಮೀರಿದ್ರೆ ಮಗ ಕೈ ತಪ್ಪಿ ಹೋಗ್ತಾನ್ರಿ. ಬರೋ ರೊಕ್ಕಾನೂ ಬರ‍್ದಂಗಾಗ್ತದೆ. ಒಪ್ಕೊಂಡು ದೊಡ್ಡತನನಾರ ಉಳಿಸ್ಕೊಳ್ರೀ' ಎಂದ ಹೆಂಡತಿಯ ಕಣ್ಣೀರ ಅಸ್ತ್ರಕ್ಕೆ ರಮೇಶನ ಪಿತಾಮಹ ಶರಣಾದ. ಸ್ವೀಟು ಪ್ಲೇಟಿನಾಗ ಬಂದು ಕೂತಿತು.

'ಮುಂದಿನ ತಿಂಗಳದಾಗ ಲಗ್ನಮಾಡಿ ಮುಗಿಸಿ ಬಿಡೋದೆಯಾ' ಎಂದು ಮೀನಾಕ್ಷಿಯ ತಂದೆ ಮಾತು ಮುಗಿಸಿದರೂ, ರಮೇಶನ ಪಿತಾಶ್ರೀ ಉಳಿದ ಖರ್ಚುವೆಚ್ಚ ವರೋಪಚಾರದ ಪಟ್ಟಿಯನ್ನೇ